ಪ್ರೋತ್ಸಾಹದಿಂದ ನಾಟಕಗಳಲ್ಲಿ ಪಾತ್ರ ಮಾಡೋದು ಶುರುವಾಯ್ತು. ಪೌರಾಣಿಕ ಪಾತ್ರಗಳಲ್ಲಿ ಪಾತ್ರ ಮಾಡೋಕೆ ಸಂಗೀತ ಪರಿಚಯ ಇರಬೇಕಿತ್ತು. ಆರಂಭದಲ್ಲಿ ಸಂಗೀತ ಜ್ಞಾನ ಇಲ್ಲದಿದ್ದಕ್ಕೆ ಸಾಮಾಜಿಕ ನಾಟಕಗಳಲ್ಲಿ ಪಾತ್ರ ಮಾಡುತ್ತಾ ಇದ್ದೆ.

'ಮಕ್ಮಲ್ ಟೋಪಿ', 'ದೇವದಾಸಿ', 'ಸಂಸಾರ ನೌಕ', 'ಗುಲಾಮ ಗಂಡ', 'ಸದಾರಮೆ'... ಇವೆಲ್ಲ ನಾಟಕಗಳನ್ನು ಎನ್.ಎಸ್. ಮೂರ್ತಿಯವರು ಹೇಳ್ಕೊಟ್ಟು ಹೇಳ್ಕೊಟ್ಟು, ನಾಟಕಗಳಿಗೆಲ್ಲ ಕರ್ಕೊಂಡೋಗಿ ಪಾತ್ರ ಮಾಡಿಸಿ ಕಲಿಸಿದರು. ರಾತ್ರಿಯೆಲ್ಲ ನಾಟಕ ನಡೆಯುವ ಸ್ಥಳದಲ್ಲೇ ಮಲಗುತ್ತಿದ್ದೆ. ಬೆಳಿಗ್ಗೆ ಎದ್ದು ಊರಿಗೆ ಬರೋದು. ಇಂಗೇ ನಡೀತಿತ್ತು. ಆಮೇಲೆ 1970ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಲಿಪಿಕ ನೌಕರನಾಗಿ ನೌಕರಿಗೆ ಸೇರ್ಕೊಂಡೆ. 1969ರವರೆಗೆ ಕೆಲಸವಿರಲಿಲ್ಲ. ಹಾಗಾಗಿ ನಾಟಕವೇ ನನ್ನ ಬದುಕಾಗಿಬಿಟ್ಟಿತ್ತು.

**◆ ನಿಮ್ಮ ಗುರು ಗುರುರಾಜುಲು ನಾಯ್ಡು ಅವರ ಬಗ್ಗೆ ಹೇಳಿ.**

ನನ್ನ ಗುರುಗಳು ಗುರುರಾಜುಲು ನಾಯ್ಡು ಅವರ ಕಥಾಕೀರ್ತನಗಳು ಚೆನ್ನಾಗಿ ವೈಭವಯುತವಾಗಿ ನಡೆಯುತ್ತಿದ್ದ ಕಾಲವದು. ಸಂಪದ್ಭರಿತ ಕಾಲ ಹರಿಕಥೆಗೆ. ಅವರ ತಂದೆ ರಾಮಸ್ವಾಮಿ ನಾಯ್ಡು ಅಂತ ಮೈಸೂರಿನವರು. ಅವ್ರು ಕಥನಕೀರ್ತನದಲ್ಲಿ ಆ ಕಾಲದಲ್ಲಿಯೇ 'ಹರಿಕಥಾ ದ್ವಂದ್ವ' ಆಡೋರು. 'ಹರಿಕಥಾ ದ್ವಂದ್ವ' ಅಂದರೆ ಜೊತೆಕತೆ. ಇವರು ವಿಶ್ವಾಮಿತ್ರನ ಮಾಡುದ್ರೆ, ಅವರು ಹರಿಶ್ಚಂದ್ರ ಮಾಡೋದು. ಕಮಾಲ್ ಮಾಡುದ್ರೆ ಕಬೀರರನ್ನು ಮಾಡೋದು... ಹೀಗೆ ಜೊತೆಜೊತೆಯಲ್ಲಿ ನಿಂತ್ಕಂಡು ಕಥೆ ಮಾಡೋದು. ಅಂಥ ಕಾಲ. ಅವರ ಹರಿಕಥೆಗಳು ಎಲ್ಲೆಲ್ಲಿ ಆಗುತ್ತೋ ಅಲ್ಲೆಲ್ಲಾ ಹೋಗಿ ಕೂತ್ಕಂಡು ಕೇಳುತ್ತಿದ್ದೆ.



ಒಂದು ಸಾರಿ ತುಮಕೂರಿನಲ್ಲಿ 'ಸಂಪೂರ್ಣ ರಾಮಾಯಣ' ನಾಟಕ. ಗುರುರಾಜುಲು ನಾಯ್ಡು ಅವರದು ರಾಮನ ಪಾತ್ರ. ಅಲ್ಲಿ ಲಕ್ಷ್ಮಣನ ಪಾತ್ರ ಮಾಡಲು ಟಿ.ವಿ. ಭದ್ರಾಚಾರ್ ಅಂತ ದೊಡ್ಡ ಆಕಾಶವಾಣಿ ಕಲಾವಿದರು ಒಪ್ಪಿಕೊಂಡಿದ್ದರು. ಮೃದಂಗ ಬಾರಿಸುತ್ತಿದ್ದ ಭದ್ರಾಚಾರ್ ಅವರಿಗೆ ಲಕ್ಷ್ಮಣನ ಪಾತ್ರ ಮಾಡಲು ಆಗಲಿಲ್ಲವೋ ಏನೋ? ನನ್ನ ಕರೆಯಿಸಿ 'ನೋಡಪ್ಪ ನನ್ನ ಕೈಲಿ ಆಗಲ್ಲ. ನೀನೇ ನಮ್ಮ ಗುರುಗಳ ಜೊತೆಯಲ್ಲಿ ಲಕ್ಷ್ಮಣನ ಪಾತ್ರ ಮಾಡು' ಅಂದ್ರು. ಆಗ ಗುರುರಾಜುಲು ನಾಯ್ಡು ನನಗೆ ಪರಿಚಯ ಇರಲಿಲ್ಲ. ದೂರದಿಂದ ನೋಡುತ್ತಿದ್ದೆ ಅಷ್ಟೇ. ದ್ವಾರಕ ಹೋಟೆಲ್‌ನಲ್ಲಿ ಇರುತ್ತಿದ್ರು. ಆಕಸ್ಮಿಕವಾಗಿ ದೊರೆತ ಅವಕಾಶದಲ್ಲಿ ನಾನು ಲಕ್ಷ್ಮಣನ ಪಾತ್ರ ಮಾಡಿದೆ. ನನ್ನ ಪಾತ್ರ, ಹಾಡು, ಸಾಹಿತ್ಯ ಸಂಗೀತ, ಪ್ರಾಸಬದ್ಧ ಮಾತುಗಳನ್ನೆಲ್ಲವನ್ನು ಗುರುರಾಜುಲು ನಾಯ್ಡು ಅವರು ಮೆಚ್ಚಿಕೊಂಡು, 'ಶನಿವಾರ, ಭಾನುವಾರ ಬೆಂಗಳೂರಿಗೆ ಬಂದುಬಿಡು. ನನ್ನತ್ರ ಕೂತ್ಕೋ. ಸ್ವಲ್ಪ ಸ್ವಲ್ಪ ಕಲುತ್ಕೋ. ನನ್ಜೊತೆನೇ ಓಡಾಡ್ಕಂಡು ಕಥೆ ಮಾಡ್ಕಂಡು ಇರು. ದುಡ್ಡು ಬರುತ್ತೆ. ಈ ನಾಟಕದಲ್ಲಿ ಏನು ಸಿಗುತ್ತೆ. ಬಾ' ಅಂತ ಕರುದ್ರು. ಸರಿ ಅಂತ ಅವತ್ತೇ ನಾನು ಗುರುರಾಜುಲು ನಾಯ್ಡು ಅವರ ಜೊತೆ ಹೊರಟೆ. ಎಪ್ಪತ್ತನೇ ಇಸವಿ. ಅವರ ಹತ್ರ ಕಲೀತಾ ಕಲೀತಾ ಅವರ ಜೊತೆಯಲ್ಲಿಯೇ ಕಥೆ ಮಾಡಲು ಶುರು ಮಾಡಿಬಿಟ್ಟೆ. ಬಭ್ರುವಾಹನ ನಾನು ಹೇಳಿದರೆ, ಅವರು ಅರ್ಜುನನದು ಹೇಳುತ್ತಿದ್ದರು. ಆಗಲೇ ಎಂಟು ಜನ ಶಿಷ್ಯರಿದ್ವಿ. 'ಕಲಿಯುಗದ ಆಂಜನೇಯ' ಅಂತ ಹೆಸರಾಗಿದ್ದ ಬಿ.ಪಿ. ರಾಜಮ್ಮ ಅವರು ಗುರುರಾಜುಲು ನಾಯ್ಡು ಅವರ ಶಿಷ್ಯರಾಗಿದ್ರು. ಅಂತಹವರ ಜೊತೆಯಲ್ಲಿ ಬೆಳೆದುಕೊಂಡು ಬಂದೆ. ಆಮೇಲೆ ಆಮೇಲೆ ಪಾತ್ರ, ಹಾಡುಗಳನ್ನೆಲ್ಲ ಇನ್ನಷ್ಟು ಕಲಿತುಕೊಂಡು ಬಂದೆ. ಅವರ ಸಂಗವೋ ಏನೋ ಹರಿಕಥೇನೆ ನನ್ನ ಮುನ್ನಡೆಸಿತು.